O.S 240/2018

ಪಿ.ಡಬ್ಲೂ-**1**

ದಿನಾಂಕ:**24.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ S.N.K. ವಕೀಲರಿಂದ:**

ನಮ್ಮ ತಂದೆ ಅರಣ್ಯ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ನಿಮ್ಮ ತಾಯಿ ಕೆ.ಪಿ. ದೇಚಮ್ಮ ಏನು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಅಡುಗೆ ಕೆಲಸ ಮಾಡಿಕೊಂಡು ನಮ್ಮ ಜೊತೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. 1981 ರಲ್ಲಿ ನಿಮ್ಮ ತಾಯಿಗೆ ಭೂಮಿ ಮಂಜೂರಾಯಿತು ಎಂದು ಹೇಳಿದ್ದು, ಆ ಸಮಯದಲ್ಲಿ ನಮ್ಮ ತಂದೆ ಸರ್ಕಾರಿ ಕೆಲಸದಲ್ಲಿದ್ದರು. ಆ ಸಮಯದಲ್ಲಿ ನಿಮ್ಮ ತಂದೆ ನಿವೃತ್ತಿ ಆಗಿರಲಿಲ್ಲ ಎಂದರೆ ಸರಿ. ನಿಮ್ಮ ತಂದೆ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಸದರಿಯವರು ನಮ್ಮ ತಾಯಿಯ ಹೆಸರಿಗೆ ಭೂಮಿಯನ್ನು ಮಂಜೂರು ಮಾಡಿಸಿದರು ಎಂದರೆ ಸುಳ್ಳು.

ನಿಮ್ಮ ತಾಯಿಯ ಹೆಸರಿಗೆ ಎಷ್ಟು ಆಸ್ತಿಗಳು ಇವೆ ಎಂದರೆ ಸಾಕ್ಷಿ 3 ಎಕರೆ 39 ಗುಂಟೆ ಮಾತ್ರ ಇರುವುದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಸ.ನಂ.788/1 ಪಿ-ಪಿ2. ನಮ್ಮ ತಾಯಿಯ ಹೆಸರಿಗೆ ಬೇರೆ ಆಸ್ತಿಗಳು ಇದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜಂಜರ್ ನಂ.75/75, ಮನೆ ನಮ್ಮ ತಾಯಿಯ ಹೆಸರಿಗೆ ಇದ್ದು, ಅವರ ಮರಣಾನಂತರ ನಮ್ಮ ಕುಟುಂಬದವರ ಹೆಸರಿಗೆ ಜಂಟಿ ಖಾತೆಯಾಗಿರುತ್ತದೆಂದರೆ ಸಾಕ್ಷಿ ಅದನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖಾತೆ ಬದಲಾವಣೆ ಕೋರಿದಾಗ ಪ್ರತಿವಾದಿ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ವಿಚಾರವಾಗಿ ನಾನು ಉಪವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿರುತ್ತೇನೆಂದರೆ ಸರಿ. ಸದರಿ ಮೇಲ್ಮನವಿಯ ವಿರುದ್ಧ ಪ್ರತಿವಾದಿ ಆರ್.ಎ. 160/2016-17 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ವಕೀಲರನ್ನು ನೇಮಿಸಿಕೊಂಡು ಆರ್.ಆರ್.ಟಿ ಪ್ರಕರಣದಲ್ಲಿ ಆದಂತಹ ಆದೇಶವನ್ನು ಎತ್ತಿ ಹಿಡಿದು ದೇಚಮ್ಮ ರವರ ವಾರಸುದಾರರಿಗೆ ಜಂಟಿ ಖಾತೆಯಾಗಬೇಕೆಂದು ಆದೇಶವನ್ನು ಹೊರಡಿಸಿರುತ್ತಾರೆಂದರೆ ಸುಳ್ಳು. ಸದರಿ ವಿಚಾರವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ

ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ನ್ಯಾಯಾಲಯ, ಮೈಸೂರಿನಲ್ಲಿ ಆರ್.ಪಿ. 37/2018, ನಿಪಿ-5 ರಂತೆ ಮೇಲ್ಮನವಿ ಸಲ್ಲಿಸಿರುತ್ತೇನೆಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ದಾವಾ ಆಸ್ತಿ ನಮ್ಮ ತಾಯಿಗೆ ಸ್ತ್ರೀ ಧನದ ಮೂಲಕ ಬಂದಂತದ್ದು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಸ್ತ್ರಿ ಧನ ಸ್ವಯಾರ್ಜಿತ ಸ್ವತ್ತು ಎಂದು ಬರೆಸಿರುತ್ತೇನೆಂದು ಸುಳ್ಳು. ಮುಂದುವರೆದು ನಮ್ಮ ತಾಯಿಯ ಸ್ವಯಾರ್ಜಿತ ಆಸ್ತಿ ಅದು ಎಂದು ನುಡಿಯುತ್ತಾರೆ. ಆರ್.ಪಿ. 37/2018 ರಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಬಗೆಹರಿಸತಕ್ಕದ್ದು ಅರ್ಜಿಯನ್ನು ಮುಕ್ತಾಯಗೊಳಿಸಿರುತ್ತಾರೆಂದರೆ ಸರಿ. 1981 ರಲ್ಲಿ ನಮ್ಮ ತಾಯಿಗೆ ಮಂಜೂರಾದ ಸಮಯದಲ್ಲಿ ನಿಮಗೆ ವಯಸ್ಸೆಷ್ಟಿತ್ತು ಎಂದರೆ ಸಾಕ್ಷಿ ನನಗೆ 13 ವರ್ಷ, ಪ್ರತಿವಾದಿ ಎಷ್ಟು ವಯಸ್ಸು ಇತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ-ತಾಯಿಗೆ 5 ಜನ ಮಕ್ಕಳಿದ್ದು, ಸದರಿಯವರ ವಯಸ್ಸು ಎಷ್ಟಿತ್ತು ಮಂಜೂರಾದ ಕಾಲಕ್ಕೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಬಂದಂತಹ ಆದಾಯವನ್ನು ಒಟ್ಟು ಕುಟುಂಬದ ನಿರ್ವಹಣೆ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ಆದಾಯದಿಂದ ನನ್ನ ಹಾಗೂ ನನ್ನ ಸಹೋದರ-ಸಹೋದರಿಯರೆಲ್ಲ ಮದುವೆಯಾಗಿರುವುದು ಎಂದರೆ ಸರಿಯಲ್ಲ. ಮುಂದುವರೆದು ಪ್ರತಿವಾದಿ ಹಾಗೂ ಕಾಳಪ್ಪ ರವರು ಸರ್ಕಾರಿ ನೌಕರಿಯಲ್ಲಿ ಹೊರಗಡೆ ಇದ್ದರು ಎಂದು ನುಡಿಯುತ್ತಾರೆ. ಸದರಿಯವರಿಗೆ ಸರ್ಕಾರಿ ನೌಕರಿ ಯಾವಾಗ ದೊರಕಿತು ಎಂದು ನನಗೆ ನೆನಪಿಲ್ಲ. ದಾವಾ ಸ್ವತ್ತಿನಲ್ಲಿ ಅವರಿಗೆ ವಿದ್ಯಾಭ್ಯಾಸ ನೀಡಿ, ನೌಕರಿ ಕೊಡಿಸಿದರು ಎಂದರೆ ಸಾಕ್ಷಿ ನಮ್ಮ ತಂದೆಯ ಸಂಬಳದಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ ನಿಮ್ಮ ಸಹೋದರ-ಸಹೋದರಿಯರೆಲ್ಲ ಏನು ಬೆಳೆಯುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಮತ್ತು ನನ್ನ ತಾಯಿ ಮಾತ್ರ ರಾಗಿ ಬೆಳೆಯನ್ನು ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ತಾಯಿಗೆ ಸಂಬಂಧಿಸಿದ ಒಂದು ಆಸ್ತಿಯನ್ನು ಮಾರಾಟ ಮಾಡಿ, ಹಣವನ್ನು ನಾವೆಲ್ಲ ಹಂಚಿಕೊಂಡಿರುತ್ತೇವೆಂದರೆ ಸಾಕ್ಷಿ ಅದು ನಮ್ಮ ತಂದೆಯ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿ ನಿಮ್ಮ ತಾಯಿಯ ಹೆಸರಿನಲ್ಲಿತ್ತು, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಯಿಂದ ನನಗೆ ಇನ್ನು ಯಾವುದೇ ಹಣ ಬಂದಿರುವುದಿಲ್ಲ, ಸುಳ್ಳು ಹೇಳಿ ನನ್ನ ಸಹಿ ಪಡೆದಿರುತ್ತಾರೆ.

ದಾವಾ ಆಸ್ತಿಯಲ್ಲಿ ಕೃಷಿ ಹೊಂಡ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಏನು ಇದೆ

ಎಂದರ ಸಾಕ್ಷಿ ನನ್ನ ಹೆಸರಿನಲ್ಲಿ ಎರಡು ಪಂಪ್ ಸೆಟ್ ಇರುತ್ತದೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಮುಂದುವರೆದು ವಕೀಲರ ಬಳಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ವಿದ್ಯುತ್ ಸಂಪರ್ಕ ಇದೆಯಾ ಎಂದರೆ ಸಾಕ್ಷಿ ಇರಲಿಲ್ಲ, ಅರ್ಜಿಯನ್ನು ಸಲ್ಲಿಸಿ ನಾನು ವಿದ್ಯುತ್ ವ್ಯವಸ್ಥೆ ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ಯಾವಾಗ ನೀಡಿರುತ್ತೇನೆಂದು ನೆನಪಿರುವುದಿಲ್ಲ. ಸದರಿ ಅರ್ಜಿಯ ದಾಖಲಾತಿಯನ್ನು ವಕೀಲರಿಗೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ನೀಡಿಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.